(ಸಾಕ್ಷಿಗೆ ದಿನಾಂಕ: 04.09.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಜೆ.ಆರ್., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನನ್ನ ದಾವೆಗೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ದಿನಾಂಕಃ 13.02.2019ರ ಮೂಲ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿ.ಪಿ.1 ಎಂದು, ದಾವಾ ಸ್ವತ್ತಿನ ಎರಡು ಪಹಣಿಗಳನ್ನು ನಿ.ಪಿ.2 ಮತ್ತು ನಿ.ಪಿ.3 ಎಂದು, ದಿನಾಂಕಃ 31.03.2023ರ ತಿಳುವಳಿಕೆ ಪತ್ರದ ಕಛೇರಿ ಪ್ರತಿಯನ್ನು ನಿ.ಪಿ.4 ಎಂದು, 10 ಅಂಚೆ ರಶೀದಿಗಳನ್ನು ಅನುಕ್ರಮವಾಗಿ ನಿ.ಪಿ.5 ರಿಂದ ನಿ.ಪಿ.14 ಎಂದು, ಅಂಚೆ ಸ್ವೀಕೃತಿಯನ್ನು ನಿ.ಪಿ.15 ಎಂದು, Addressee not found ಎಂಬ ಷರಾದೊಂದಿಗೆ ವಾಸಪ್ಪು ಬಂದ 9 ಅಂಚೆ ಲಕೋಟೆಗಳನ್ನು ಅನುಕ್ರಮವಾಗಿ ನಿ.ಪಿ.16 ರಿಂದ ನಿ.ಪಿ.24 ಎಂದು ಗುರುತಿಸಲಾಯಿತು.

ನಿ.ಪಿ.1ರ ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ. ನಿ.ಪಿ.1ರ ದಾಖಲೆಯನ್ನು 1 ರಿಂದ 6ನೇ ಪ್ರತಿವಾದಿಯರು ನನಗೆ ಬರೆದುಕೊಟ್ಟಿರುತ್ತಾರೆ. ನಿ.ಪಿ.1ರ ದಾಖಲೆಗೆ ನಾನು ಮತ್ತು 1 ರಿಂದ 6ನೇ ಪ್ರತಿವಾದಿಯರು ಸಹಿ ಮಾಡಿರುತ್ತೇವೆ. ಸಾಕ್ಷಿ ನೋಡಿ ಗುರುತಿಸಿದ ತನ್ನ ಸಹಿಯನ್ನು ನಿ.ಪಿ.1(ಎ) ಎಂದು, 1ನೇ ಪ್ರತಿವಾದಿಯ ಸಹಿಯನ್ನು ನಿ.ಪಿ.1(ಬಿ) ಎಂದು, 3ನೇ ಪ್ರತಿವಾದಿಯ ಸಹಿಯನ್ನು ನಿ.ಪಿ.1(ಸಿ) ಎಂದು, 4ನೇ ಪ್ರತಿವಾದಿಯ ಸಹಿಯನ್ನು ನಿ.ಪಿ.1(ಡಿ) ಎಂದು, ಅಲ್ಪ ವಯಸ್ಕನಾದ 5ನೇ ಪ್ರತಿವಾದಿಯ ಪರವಾಗಿ 3ನೇ ಪ್ರತಿವಾದಿ ಸಹಿ ಮಾಡಿದ್ದು ಸದರಿ ಸಹಿಯನ್ನು ನಿ.ಪಿ.1(ಇ) ಎಂದು ಮತ್ತು 6ನೇ

ಪ್ರತಿವಾದಿಯ ಸಹಿಯನ್ನು ನಿ.ಪಿ.1(ಎಫ್) ಎಂದು ಗುರುತಿಸಲಾಯಿತು. ನಿ.ಪಿ.1 ದಾಖಲೆಗೆ 2ನೇ ಪ್ರತಿವಾದಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ನಿ.ಪಿ.1ರ ದಾಖಲೆಗೆ ಸಾಕ್ಷಿದಾರರಾಗಿ ರೇಣುಕಪ್ಪ ಮತ್ತು ಮಾರೇಗೌಡರವರು ಸಹಿ ಮಾಡಿರುತ್ತಾರೆ. ನಿ.ಪಿ.1ರ ದಾಖಲೆಯಲ್ಲಿರುವ ಸದದರಿಯವರ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.1(ಜಿ) ಮತ್ತು ನಿ.ಪಿ.1(ಹೆಚ್) ಎಂದು ಗುರುತಿಸಲಾಯಿತು.

ನಿ.ಪಿ.1ರ ದಾಖಲೆಯನ್ನು ಪತ್ರಬರಹಗಾರರಾದ ನಾಗರಾಜುರವರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿ.ಪಿ.1(ಐ) ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.